# <u>ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚನ್ನಪಟ್ಟಣ.</u>

**<u>ಸಿಸಿ: 110/2021</u>**

**ಪಿರ್ಯಾದುದಾರರು** ಃ ರಮ್ಯ,
ಕೋಂ ಸ್ವಾಮಿ.ಕೆದ
32 ವರ್ಷ,
ವಾಸಃ ಕಬ್ಬಾಳು ಗ್ರಾಮ ಮತ್ತು ಅಂಚೆ,
ಸಾತನೂರು ಹೋಬಳಿ,
ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

-ವಿರುದ್ಧ-

**ಆರೋಪಿ** ಃ ರೇಣುಕ ಕೋಂ ನಾಗಾರಾಜು.ಸಿ.ಬಿ,
50 ವರ್ಷ,
ವಾಸ ಃ ಪುನೀತ್ ಫ್ಯಾಷನ್,
ಅಂಚೆ ಕಚೇರಿ ರಸ್ತೆ,
ಚನ್ನಪಟ್ಟಣ ಟೌನ್,
ರಾಮನಗರ ಜಿಲ್ಲೆ.

## <u>ಆಪಾದನೆ</u>

ಆರೋಪಿ ಮತ್ತು ಪಿರ್ಯಾದುದಾರರು ಒಳ್ಳೆಯ ಸ್ನೇಹಿತರಾಗಿರುತ್ತೀರಿ. ಆದಕಾರಣ ಆರೋಪಿಯು ಪಿರ್ಯಾದುದಾರರನ್ನು ದಿನಾಂಕಃ**15.06.2019** ರಂದು ಸಂಪರ್ಕಿಸಿ ನಿವೇಶನ ಕೊಂಡುಕೊಳ್ಳುವುದಾಗಿ ಹೇಳಿ ಪಿರ್ಯಾದುದಾರರಿಂದ ದಿಃ**25.06.2019** ರಂದು **ರೂ.3,00,000/-** ಗಳನ್ನು ಸಾಲವಾಗಿ ಪಡೆದಿದ್ದು ಹಾಗೂ ಸದರಿ ಹಣವನ್ನು ಪಿರ್ಯಾದುದಾರರಿಗೆ ಅಲ್ಪ ಕಾಲದಲ್ಲಿ ಮರುಪಾವತಿ ಮಾಡುತ್ತೇನೆಂದು ಹೇಳಿರುತ್ತೀರಿ. ತದನಂತರ ಅವರು ಆರೋಪಿಯಾದ ನಿಮ್ಮನ್ನು ಹಣವನ್ನು ಮರುಪಾವತಿಸುವಂತೆ ಕೇಳಿದಾಗ ಆರೋಪಿಯಾದ ನೀವು ಸದರಿ ಹಣದ ಮರುಪಾವತಿಗೆ ಸಾಲದ ಭದ್ರತೆಗಾಗಿ ಚನ್ನಪಟ್ಟಣ ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಚೆಕ್ ಸಂಖ್ಯೆಃ **526050** ಇದರ ದಿನಾಂಕ **14.01.2020** ದಂದು **3,00,000/-** ರೂ ಚೆಕ್ ನ್ನು ಬ್ಯಾಂಕಿಗೆ ಹಾಜರುಪಡಿಸುವಂತೆ ಪಿರ್ಯಾದುದಾರರಿಗೆ ನೀಡಿ ನಗದೀಕರಣಗೊಳಿಸಿಕೊಳ್ಳುವಂತೆ ಹೇಳಿರುತ್ತೀರಿ, ಅದರಂತೆ ಪಿರ್ಯಾದುದಾರರು ನೀವು ಕೊಟ್ಟ ಚೆಕ್ ನ್ನು ದಿಃ**14.01.2020** ರಂದು ಪಿರ್ಯಾದುದಾರರು ಖಾತೆ ಹೊಂದಿರುವ ಚನ್ನಪಟ್ಟಣ ಶಾಖೆಯ ತಮಿಳುನಾಡು ಮರ್ಚಂಟ್ ಬ್ಯಾಂಕ್‌ಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ, ಬ್ಯಾಂಕಿನವರು ಚೆಕ್ ನಂ.**526050** ಅನ್ನು

**"ಸಾಕಷ್ಟು ಹಣ ಇರುವುದಿಲ್ಲ"** ಎಂಬ ಹಿಂಬರಹದೊಂದಿಗೆ ದಿಃ **16.01.2020** ರಂದು ಹಿಂಬರಹದೊಂದಿಗೆ ಚೆಕ್‌ನ್ನು ವಾಪಸ್ಸು ನೀಡಿರುತ್ತಾರೆ. ಆದ್ದರಿಂದ ಅವರು ದಿಃ **06.02.2020** ರಂದು ನಿಮಗೆ ವಕೀಲರ ಕಾನೂನು ತಿಳುವಳಿಕೆ ಪತ್ರವನ್ನು ನೊಂದಾಯಿತ ಮತ್ತು ತ್ವರಿತ ಅಂಚೆ ಮೂಲಕ ನೀಡಿದ್ದು, ಆರೋಪಿಗೆ ಸದರಿ ಶೀಘ್ರ ಅಂಚೆಯು ತಲುಪಿರುತ್ತದೆ ಮತ್ತು ನೋಂದಣಿ ಅಂಚೆಯು ದಿನಾಂಕಃ **10.02.2020** ಷರಾದೊಂದಿಗೆ ಹಿಂತಿರುಗಿ ಬಂದಿರುತ್ತದೆ, ನೀವು ಯಾವುದೇ ಉತ್ತರ ನೀಡಿರುವುದಿಲ್ಲ ಹಾಗೂ ಚೆಕ್ಕಿನ ಯಾವುದೇ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆದಕಾರಣ ನೀವು ಕಲಂ.**138** ಎನ್.ಐ.ಆಕ್ಟ್ ಮತ್ತು ಭಾ.ದಂ.ಸಂ.ಕಲಂ **420** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

**1.** ಸದರಿ ಆಪಾದನೆ ಓದಿ ಹೇಳಿದ್ದು ಅರ್ಥವಾಯಿತೆ **?**

ಉತ್ತರ ಃ

**2.** ನಿಮ್ಮ ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೋ **?**

ಉತ್ತರ ಃ

(ಮೇಲ್ಕಂಡ ಆಪಾದನೆಯನ್ನು ಆರೋಪಿತನಿಗೆ ಓದಿ ಹೇಳಲಾಗಿ ಅದನ್ನು ಅರ್ಥೈಸಿಕೊಂಡು ನನಗೆ ನೀಡಿದ ಉತ್ತರವನ್ನು ನಮೂದಿಸಿಕೊಳ್ಳಲಾಯಿತು ಮತ್ತು ಈ ಒಂದು ಆಪಾದನೆ ಪತ್ರವು ಸತ್ಯವಾಗಿ ಮತ್ತು ಸಂಪೂರ್ಣವಾಗಿ ಆರೋಪಿತನು ನೀಡಿದ ಹೇಳಿಕೆಯನ್ನು ಒಳಗೊಂಡಿದೆಯೆಂದು ದೃಢೀಕರಿಸುತ್ತೇನೆ.)

ದಿನಾಂಕಃ **17.06.2023.**

ಅಪರ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ. ಚನ್ನಪಟ್ಟಣ.